# ಗುಲಬರ್ಗಾ ವಿಶ್ವವಿದ್ಯಾಲಯ

## ರಾಷ್ಟ್ರೀಯ ಸೇವಾ ಯೋಜನೆ

ಜ್ಞಾನ ಗಂಗಾ, ಗುಲಬರ್ಗಾ – 585 106

08472-245971 (ಕ); 9449122405 (ನಿ)


"ವಿಜ್ಞಾನ ಮತ್ತು ತಂತ್ರಜ್ಞಾನ ಚಟುವಟಿಕೆಗಳಲ್ಲಿ ಯುವಕರ ಪಾತ್ರ"

ಸಂ.ಗುವಿಗು/ರಾಸೇಯೋ/ಅನುದಾನ/2015-16/166 ದಿನಾಂಕ: 23.02.2016

ಗೆ

ಪ್ರಾಚಾರ್ಯರು,
ಸಂಬಂಧಪಟ್ಟ ರಾಸೇಯೋ ಮಹಾವಿದ್ಯಾಲಯಗಳಿಗೆ

ವಿಷಯ: 2015-16ನೇ ಸಾಲಿನ ರಾಸೇಯೋ ದೈನಂದಿನ ಚಟುವಟಿಕೆಯ ಅನುದಾನ ಬಿಡುಗಡೆ ಮಾಡುವ ಕುರಿತು.

ಮಾನ್ಯರೆ,

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಮಹಾವಿದ್ಯಾಲಯದ ರಾಸೇಯೋ ಘಟಕದ ದೈನಂದಿನ ಚಟುವಟಿಕೆಗಳ ಅನುದಾನವನ್ನು ನಿಯಮಾವಳಿಗಳ ಪ್ರಕಾರ ಪ್ರತಿ ವಿದ್ಯಾರ್ಥಿಗೆ ರೂ.160.00 ರಂತೆ ರೂ.16000.00 / ರೂ.8000.00, ಆನ್‌ಲೈನ ಮುಖಾಂತರ ದಿನಾಂಕ 17.02.2016 ರಂದು ತಾವು ಕೊಟ್ಟಿರುವಂತೆ ಬ್ಯಾಂಕ ಖಾತೆಗಳ ಸಂಖ್ಯೆಗೆ ಜಮಮಾಡಲಾಗಿದೆ. ಈ ಅನುದಾನಕ್ಕೆ ಸಂಬಂಧಿಸಿದಂತೆ, ರಾಜ್ಯ ಸರಕಾರ ಗೊತ್ತುಪಡಿಸಿದ ಈ ಕೆಳಗಿನ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಕೋರುತ್ತೇನೆ.

1. ಈ ಅನುದಾನದ ಮೊತ್ತವನ್ನು ದಯವಿಟ್ಟು ರಾಸೇಯೋ ಜಂಟಿ ಖಾತೆಗೆ ಜಮಾ ಮಾಡಬೇಕು ಹಾಗೂ ಅದನ್ನು ಡ್ರಾ ಮಾಡಿ 31 ಮಾರ್ಚ-2016ರ ಒಳಗಾಗಿ ಉದ್ದೇಶಿತ ಕಾರ್ಯಕ್ಕಾಗಿ ಖರ್ಚು ಮಾಡಬೇಕು.
2. ಮಹಾವಿದ್ಯಾಲಯ/ಆಡಳಿತ ಮಂಡಳಿಯಿಂದ ಮುಂಗಡ ಪಡೆಯುವ ಸಂಧರ್ಭ ಬಂದರೆ ಅದಕ್ಕೆ ವಿಶ್ವವಿದ್ಯಾಲಯದ ಪರವಾನಿಗೆ ಪಡೆದು ಮುಂಗಡ ಪಡೆಯುವ ಹಣವನ್ನು ರಾಸೇಯೋ ಜಂಟಿ ಖಾತೆಗೆ ತೆಗೆದುಕೊಂಡು ಖರ್ಚು ಮಾಡಬಹುದು.
3. ಈ ಅನುದಾನದಿಂದ ಕೊಂಡುಕೊಂಡ ಎಲ್ಲಾ ಸಲಕರಣೆಗಳ ವಿವರಗಳನ್ನು ನಿಯಮಾನುಸಾರ ರಾಸೇಯೋ ಸ್ಟಾಕ್ ರೆಜಿಸ್ಟರನಲ್ಲಿ ದಾಖಲಿಸಬೇಕು.
4. ಖರ್ಚು ಮಾಡಿದ ವಿವರಗಳನ್ನು ಧೃಡೀಕೃತ ವೋಚರಗಳೊಂದಿಗೆ ಕಾಯಿದಿಟ್ಟಿಕೊಳ್ಳಬೇಕು.

Contd..,

ಈ ವರ್ಷದ ಒಟ್ಟು ದೈನಂದಿನ ಚಟುವಟಿಕೆಗಳ ಅನುದಾನದಿಂದ ಪ್ರಮುಖ ಬಾಬತ್ತುಗಳ ಮೇಲೆ ಮಾಡಬೇಕಾದ ಗರಿಷ್ಠ ವೆಚ್ಚದ ಹಂಚಿಕೆಯ ವಿವರವು ಈ ಕೆಳಗಿನಂತಿದೆ.

| ಕ್ರ.ಸಂ. | ಬಾಬತ್ತುಗಳ ವಿವರ | ಪ್ರತಿ ಸ್ವಯಂ ಸೇವಕರಿಗೆ |
|---|---|---|
| 1. | ಸ್ವಯಂ ಸೇವಕರ ಉಪಹಾರ ವೆಚ್ಚ | ರೂ.128.00 |
| 2. | ಪ್ರಯಾಣ ಭತ್ತೆ<br>ಕಾರ್ಯಕ್ರಮ ಅಧಿಕಾರಿಯ ತರಬೇತಿ/ಸಭೆಗೆ ಹೋಗಿಬರುವ ವೆಚ್ಚ ಮತ್ತು ವಿದ್ಯಾರ್ಥಿಗಳನ್ನು ಜಿಲ್ಲಾ/ವಿ.ವಿ. ಮಟ್ಟದ ಶಿಬಿರಗಳಿಗೆ ಕಳುಹಿಸುವ ವೆಚ್ಚ. | ರೂ.15.00 |
| 3. | ಶ್ರಮದಾನ ಸಲಕರಣೆಗಳು | ರೂ.10.00 |
| 4. | ಆಡಳಿತಾತ್ಮಕ ಭತ್ತೆ | ರೂ.02.00 |
| 5. | ಕಾಂಟಿಂಜನ್ಸಿ ವೆಚ್ಚ | ರೂ.05.00 |
| | **ಒಟ್ಟು** | **ರೂ.160.00** |

ಈ ವಿವರಗಳಿಗೆ ಅನುಗುಣವಾಗಿ ಅಂತ್ಯದಲ್ಲಿ ಚಾರ್ಟೆಡ್ ಅಕೌಂಟಂಟ್ಸ್ (Chartered Accountants) ರಿಂದ ಅಡಿಟ್ ಮಾಡಿಸಿ ಮೂಲ ಓಚರಗಳೊಂದಿಗೆ ದಿನಾಂಕ 15.04.2016ರ ಒಳಗಾಗಿ ಈ ಕಛೇರಿಗೆ ಸಲ್ಲಿಸಬೇಕು.

ದೈನಂದಿನ ಚಟುವಟಿಕೆಗಳನ್ನು ಬಲಪಡಿಸುವ ಸಲುವಾಗಿ ಗೊತ್ತು ಪಡಿಸಿದ ಕಾರ್ಯ ಯೋಜನೆಯನ್ನು ಹಾಕಿಕೊಂಡ ಪ್ರಕಾರ ಚಟುವಟಿಕೆಗಳನ್ನು ನಡೆಸಿರಬೇಕು/ನಡೆಸಬೇಕು ಹಾಗೂ ಅದರ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸೂಕ್ತ ವಿವರಗಳೊಂದಿಗೆ ಬೇಗನೆ ಸಲ್ಲಿಸಲಬೇಕಾಗಿ ಕೋರಿಕೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,



**ಡಾ. ಜಿ. ಶ್ರೀರಾಮುಲು**

ರಾ.ಸೇ.ಯೋ. ಕಾರ್ಯಕ್ರಮ ಸಂಯೋಜಕರು